ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA-CHM. ಫೋನ್ : 114

೮ನೇ ವರ್ಷ 30ನೇ ಸಂಚಿಕೆ ಕೊಪ್ಪ 18-3-1990 ಭಾನುವಾರ ಬೆಲೆ 60 ಪೈಸೆ

ಅಮಾಯಕನ ಮೇಲೆ ರಾಜಕೀಯ ಹಲ್ಲೆ

ಹರಿಹರಪುರ.: ಇಲ್ಲಿನ ಮಂಡಲ ಸದಸ್ಯೆ ಜಯಮ್ಮ ಅವರ ಗಂಡ, ಗಾರೆ ಕೆಲಸದ ಸಂಜೀವ ಎಂಬವರ ಮೇಲೆ ಕಳೆದ ಶನಿವಾರ ನಿಲುವಾಗಿಲಿನಲ್ಲಿ ಮಾರಕ ಹಲ್ಲೆ ನಡೆದಿದೆ.

ಕೆಲ ಸ್ಥಳೀಯರು ಅವರನ್ನು ಬಿಡಿಸಿದ್ದು ಒಂದೆರಡು ನಿಮಿಷ ತಡವಾಗಿದ್ದರೂ ಸಂಜೀವನ ಪ್ರಾಣಕ್ಕೆ ಸಂಚಕಾರವಿತ್ತೆಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಅವರಿಗೆ ಕೈ ಮುರಿದು, ಮೈ ಎಲ್ಲ ಹುಡಿಯಾಗಿದೆ. ಕೊಪ್ಪ ಆಸ್ಪತ್ರೆಯಲ್ಲಿ ಒಂದು ವಾರ ಚಿಕಿತ್ಸೆ ನೀಡಲಾಯಿತು.

ಮಂಡಲ ಪ್ರಧಾನ ಹುದ್ದೆಗೆ ಆಸಗೋಡು ಜಯಪ್ರಕಾಶ್ ಮತ್ತು ಬಿ. ಎಂ. ರಘುನಾಥ್ ನಡುವೆ ಉಂಟಾದ ಪೈಪೋಟಿಯಲ್ಲಿ ಜಯಮ್ಮ ನಿರ್ಣಾಯಕ ಹಂತದಲ್ಲಿ ಜಯಪ್ರಕಾಶ್‌ಗೆ ಬೆಂಬಲ ನೀಡಿದ್ದೇ ಈ ಹಲ್ಲೆಯ ಹಿನ್ನೆಲೆ ಎಂದು ಇಡೀ ಹೋಬಳಿ ಪಿಸುಗುಡುತ್ತಿದೆ. ಆದರೆ ಇದರಲ್ಲಿ ತನ್ನ ಪಾತ್ರವೇನೂ ಇಲ್ಲವೆಂದು ರಘುನಾಥ್ ನಿರಾಕರಿಸುತ್ತಾರೆ.

ಹಲ್ಲೆ ಎಸಗಿದ ನಿಲುವಾಗಿಲಿನ ಕುಖ್ಯಾತ ರೌಡಿ ಬಾಬು, ವಾಸು ಮತ್ತಿತರರನ್ನು ಹರಿಹರಪುರ ಪೋಲೀಸರು ಕೈಕೋಳದೊಂದಿಗೆ ಮೆರವಣಿಗೆ ಮಾಡಿ, ನ್ಯಾಯಾಂಗ ಬಂಧನಕ್ಕೊಳಪಡಿಸುವುದರೊಳಗೆ ಅವರುಗಳನ್ನು ಜಾಮೀನಿನಲ್ಲಿ ಬಿಡಿಸಲಾಗಿತ್ತು. ಸ್ಥಳೀಯ ಮುಖಂಡರಿಗೆ ಅವಾಚ್ಯವಾಗಿ ಬಯ್ಯುವುದಲ್ಲದೆ ಸಾಕ್ಷಿಗಳನ್ನೂ ಬೆದರಿಸುತ್ತಿದ್ದಾನೆಂಬ ದೂರಿನ ಮೇಲೆ ಪುನಃ ಬಾಬುವನ್ನು ಮಾ. 16ರಂದು ಬಂಧಿಸಿ ಕೈಕೋಳ ತೊಡಿಸಿ ಮೆರವಣಿಗೆ ಮಾಡಿ ಪುನಃ ಜಾಮೀನಿನ ಮೇಲೆ ಬಿಡಲಾಗಿದೆ

ಹರಿಹರಪುರ ಸುತ್ತಮುತ್ತ ಆತಂಕದ ಛಾಯೆ ಹರಡಿದೆ.

ತೂಕ-ಅಳತೆ ಅಧಿಕಾರಿಗಳ ವಂಚನೆ ಜಾಲ ಜಯಪುರ ನಾಗರಿಕ ವೇದಿಕೆಯಿಂದ ಬಯಲು

(ವರದಿ : ಕೃಷ್ಣ ಭಂಡಾರಿ)

ಜಯಪುರ : ತೂಕ-ಅಳತೆ ಸಾಧನಗಳ ಪರಿಶೀಲನೆ ಮತ್ತು ದುರಸ್ತಿಯ ಹೆಸರಲ್ಲಿ ಹಾಗೂ ಪ್ಯಾಕೆಟ್‌ಗಳ ಮೇಲೆ ಸ್ಥಳೀಯ ತೆರಿಗೆ ದರ ನಮೂದಿಸಿಲ್ಲವೆಂಬ ನೆಪದಲ್ಲಿ ವ್ಯಾಪಾರಿಗಳಿಂದ ಮಾತ್ರವಲ್ಲದೆ ಸಹಕಾರ ಸಂಘಗಳಿಂದಲೂ ಸಹ ಅಪಾರ ಪ್ರಮಾಣದಲ್ಲಿ ಹಣ ದೋಚುತ್ತಿದ್ದ ತೂಕ-ಅಳತೆ ಇಲಾಖೆ ಅಧಿಕಾರಿಗಳನ್ನು ಇಲ್ಲಿನ ನಾಗರಿಕ ವೇದಿಕೆ ಬಯಲಿಗೆಳೆದಿದೆ.

ಅಳತೆ-ತೂಕದ ಸಲಕರಣೆಗಳಿಗೆ ಯಾವುದೇ 'ದುರಸ್ತಿ' ಮಾಡದಿದ್ದರೂ ನೂರಾರು ರೂ. ವಸೂಲಿ ಮಾಡಿ ಅದನ್ನು ಈ ಅಧಿಕಾರಿಗಳು ಹಾಗೂ 'ದುರಸ್ತಿ'ಯ ಕಂಟ್ರಾಕ್ಟ್‌ದಾರ ಹಂಚಿಕೊಳ್ಳುತ್ತಿದ್ದುದನ್ನು ವೇದಿಕೆಯ ಸದಸ್ಯರ ಮತ್ತು ನಾಗರಿಕರ ಒತ್ತಾಯಕ್ಕೆ ಮಣಿದು ಈ ದುಷ್ಟ ಅಧಿಕಾರಿಗಳು ಒಪ್ಪಿಕೊಂಡರು.

ಈ ಬಗ್ಗೆ ಪೋಲೀಸರಿಗೂ ಶಾಸಕರಿಗೂ ದೂರು ನೀಡಿ, ಅವರೂ ಬಂದು ಅಧಿಕಾರಿಗಳಿಗೆ ತಾಕೀತು ಮಾಡಿದ ವಿಶಿಷ್ಟ ಅನುಭವದ ಜೊತೆಗೆ, ಮೇಲೆ ಕಾಣಿಸಿದಂತೆ ನುಂಗಿ 'ದಕ್ಕಿತು' ಎಂದು ತಿಳಿದಿದ್ದ ಕೆಲವರ ಹಣವನ್ನು 'ಕಕ್ಕಿದ' ಪ್ರಪ್ರಥಮ ಅನುಭವವೂ ಈ ಅಧಿಕಾರಿಗಳ ಪಾಲಿಗಾಯಿತು.

ವೇದಿಕೆ ಊರಿನ ಇನ್ನೂ ಹಲವು ಸಮಸ್ಯೆಗಳನ್ನು ಕೈಗೆತ್ತಿಕೊಂಡಿದೆ. (ಇನ್ನಷ್ಟು ವಿವರ ಮುಂದಿನ ಸಂಚಿಕೆಯಲ್ಲಿ)

ಈ ಇಲಾಖೆಯ ಅಧಿಕಾರಿಗಳ ಚಟುವಟಿಕೆ ಮತ್ತು ಅವರ ಆಸ್ತಿಪಾಸ್ತಿಗಳ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಜನಪ್ರತಿನಿಧಿಗಳು ಕ್ರಮ ಕೈಗೊಳ್ಳಬೇಕೆಂದು ವೇದಿಕೆ ಆಗ್ರಹಿಸಿದೆ.

ಸ್ಥಳೀಯರ ರಾಜಕೀಯ : ಉದ್ಘಾಟನೆಗೆ ಬರದ ಶಾಸಕರು

(ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ : ಬೆಟ್ಟಗೇರಿ ಗ್ರಾಮದಲ್ಲಿ ನೂತನವಾಗಿ ಆರಂಭವಾದ ಸಂತೋಷ ಯುವಕ ಮಂಡಲದ ಉದ್ಘಾಟನೆಗೆ ಆಹ್ವಾನಿತರಾಗಿದ್ದ ಶಾಸಕ ಶಾಮಣ್ಣ ಅವರು ಖಂಡಿತ ಬರುವುದಾಗಿ ಸಂಘದವರಲ್ಲಿ ಹೇಳಿದ್ದರಂತೆ. ಆದರೆ ಆಹ್ವಾನ ಪತ್ರಿಕೆಯಲ್ಲಿ ಸ್ಥಳೀಯರೊಬ್ಬರ ಹೆಸರನ್ನು ಹಾಕದಿದ್ದುದಕ್ಕೆ ಅವರು ಶಾಸಕರಿಗೆ ಬರಬಾರದೆಂದು ತಿಳಿಸಿದ್ದರಿಂದ ಅವರು ಬರಲಿಲ್ಲವೆಂದು ಸದಸ್ಯರು ನೋವಿನಿಂದ ತಿಳಿಸಿದ್ದಾರೆ. ಕೊನೆಗೆ ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ, ಪ್ರಧಾನ ಶ್ರೀನಿವಾಸಯ್ಯ ಉದ್ಘಾಟಿಸಿದರು.

ಶಾಸಕರು ಇದೇ ಕಾರಣಕ್ಕೆ ಬರದಿದ್ದುದು ನಿಜವಿದ್ದಲ್ಲಿ ಅವರು ಇಂಥ ಕೀಳು ಮಟ್ಟದ ರಾಜಕೀಯ ಮಾಡಬಾರದೆಂದು ಊರವರು ನೊಂದು ನುಡಿಯುತ್ತಾರೆ.

ಸಾಮೂಹಿಕ ವಿವಾಹ

ಕೊಪ್ಪ : ಬಾಳಗಡಿಯ ವಿದ್ಯಾ ಮಹಿಳಾ ಸಮಾಜ, ಚೇತನ ಯುವತಿ ಮಂಡಳಿ ಏರ್ಪಡಿಸಿರುವ ಉಚಿತ ಸಾಮೂಹಿಕ ವಿವಾಹ 8-4-90 ನೇ ಭಾನುವಾರ ಮಧ್ಯಾಹ್ನ 12 ಗಂಟೆಗೆ ಬಾಳಗಡಿಯ ಆಫೀಸರ್ಸ್ ಕ್ಲಬ್ ಆವರಣದಲ್ಲಿ ನಡೆಯುತ್ತದೆ. ಆಸಕ್ತರು 25-3-90 ರವರೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು.

ಜಿಲ್ಲಾ ಮಟ್ಟದ ಥ್ರೋಬಾಲ್

ಶೃಂಗೇರಿ: ಇಲ್ಲಿನ ಜೂನಿಯರ್ ಛೇಂಬರ್ ಏಪ್ರಿಲ್ 7 ಮತ್ತು 8 ರಂದು ದಿ॥ ಕೆ. ಎನ್. ವೀರಪ್ಪ ಗೌಡ ಸ್ಮಾರಕ ಜಿಲ್ಲಾ ಮಟ್ಟದ ಥ್ರೋಬಾಲ್ ಸ್ಪರ್ಧೆ ಏರ್ಪಡಿಸಿದೆ. ರೂ 25-00 ಪ್ರವೇಶ ಶುಲ್ಕದೊಂದಿಗೆ 26-3-90 ರೊಳಗೆ ಪ್ರವೇಶಗಳನ್ನು ಅಧ್ಯಕ್ಷರಿಗೆ ಕಳಿಸಬಹುದು.

ಯಡಗುಂದ 'ಕಾಡುನಾಶ' ಹಗರಣ: "ಚೆಂಡು ಶಾಸಕರ ಕೋರ್ಟಿನಲ್ಲಿದೆ"

ಕೊಪ್ಪ : ಮೇಗೂರು ಬಳಿಯ ಯಡಗುಂದ ಕಾಡಿನಲ್ಲಿ ಅರಣ್ಯ ಇಲಾಖೆ ನಾಟಾ ಸಂಗ್ರಹಿಸಿರುವುದರಲ್ಲಿ ಕರ್ಮಕಾಂಡ (ಸ್ಕ್ಯಾಂಡಲ್) ನಡೆದಿರುವುದೇ ನಿಜ ಎಂದು ಶಾಸಕ ಶಾಮಣ್ಣ ಅಭಿಪ್ರಾಯಪಡುತ್ತಾರೆ. ಶೃಂಗೇರಿ ವಲಯ ಅರಣ್ಯಾಧಿಕಾರಿ ಮುನಿಸ್ವಾಮಿ ತನ್ನ ತಮ್ಮನ ಹೆಸರಲ್ಲಿ ತಮ್ಮ ರೇಂಜಿನಲ್ಲೇ ಈ ಬಾಬಿನ ಕಂಟ್ರಾಕ್ಟ್ ನಡೆಸುವುದು ಹಾಗೂ 4-3-90ರ ನಮ್ಮ ವರದಿಯಲ್ಲಿ ಕಾಣಿಸಿರುವಂತೆ, ಸಂಶಯಕ್ಕೆಡೆ ಕೊಡುವ ಇನ್ನಿತರ ಕಾರಣಗಳಿಂದಾಗಿ, ಸ್ಥಳೀಯ ಮುಖಂಡರು ಎತ್ತಿರುವ ಪ್ರಶ್ನೆಗಳಿಗೆ ಡಿ. ಎಫ್. ಓ. ಕೊಟ್ಟಿರುವ ವಿವರಣೆಗಳನ್ನು ಅವರುಗಳು ನಂಬುತ್ತಿಲ್ಲ.

ಈ ವಿಚಾರ ಈಚಿನ ಶೃಂಗೇರಿ ತಾ॥ ಪಂಚಾಯ್ತಿ ಸಮಿತಿ ಸಭೆಯಲ್ಲೂ ಪುನಃ ಪ್ರಸ್ತಾಪವಾಗಿ ಬಹಳ ಹೊತ್ತು ಬಿಸಿ ಚರ್ಚೆ ನಡೆದಿದೆ. ಮರಗಳಿಗೆ ಮೊದಲೇ ನಂಬರ್ ಹಾಕಿರಲಿಲ್ಲ, ಗಲಾಟೆ ಆರಂಭವಾದ ಮೇಲೆ ಹಾಕಿದರು; ಹಸಿ ಮರಗಳನ್ನು ಸಹ ಕಡಿದು, ನೇರವಾಗಿ ಸಾಗಾಣಿಕೆ ಮಾಡುವ ಉದ್ದೇಶದಿಂದ ಮರಗಳ ಬುಡಕ್ಕೇ ಲಾರಿ ರಸ್ತೆ ಮಾಡಿ ಬಿಟ್ಟಿದ್ದಾರೆ; ರೇಂಜರೊಬ್ಬರೇ ದುಡ್ಡು ತಿನ್ನುತ್ತಿದ್ದಾರೆಂದು ಫಾರೆಸ್ಟರ್ ಹೇಳಿದರು ; ಹಲವು ಹಸಿ ಮರಗಳ ಬಡ್ಡೆಗಳನ್ನು ದರಗಿನಿಂದ ಮುಚ್ಚಿ ಹಾಕಿದ್ದರು ; ಈ ವಿವಾದಗಳನ್ನೆಲ್ಲ ಊರವರು ವಿಚಾರಿಸಿದಾಗ ರೇಂಜರ್ ಡಿಎಫ್‌ಓ ಎಲ್ಲರೂ ಬಹಳ ನರ್ವಸ್ ಆಗಿದ್ದರು ; ರಾತ್ರೋ ರಾತ್ರಿ ಮರ ಸಾಗಣೆಯಾಗಿದೆ, ಡಿಪೋಗೆ ಹೋಗದೆ ಹೊರಗೂ ಸಾಗಣೆಯಾಗಿದೆ; ಮರ ಸಾಗಣೆಯ ಪರ್ಮಿಟ್ ಪುಸ್ತಕಗಳು ಕಂಟ್ರ್ಯಾಕ್ಟರನ ವಶವೇ ಇರುತ್ತಿದ್ದು, ಹೆಗ್ಗಾರುಕೊಡಿಗೆ ಹೋಟೆಲ್‌ನಲ್ಲೂ ಬಿದ್ದಿರುತ್ತಿದ್ದವು—ಇವೇ ಮುಂತಾದ ಆರೋಪಗಳನ್ನು ಕೆಲವು ಸ್ಥಳೀಯರು ಪುನರುಚ್ಚರಿಸುತ್ತಾರೆ.

ಈ ಬಗ್ಗೆ ಶಾಸಕರನ್ನೂ ಡಿಎಫ್‌ಓರನ್ನೂ ಪುನಃ ಊರವರ ಜೊತೆ, ಇನ್ನೊಮ್ಮೆ ಸ್ಥಳ ತನಿಖೆಗೆ ಹೋಗುವಂತೆ ಮಾತಲು 'ಮುಂಜಾವು' ಯತ್ನಿಸಿದಾಗ, ಶಾಸಕರು ಅದರ ಅಗತ್ಯವಿಲ್ಲವೆಂದು ಹೇಳಿ, ಉನ್ನತ ಮಟ್ಟದ ತನಿಖೆ ಏರ್ಪಡಿಸಲು ಒಪ್ಪಿಕೊಂಡಿದ್ದಾರೆ.

ಡಿಎಫ್‌ಓ ಅವರು ಸಹ, "ತನಿಖೆಗಾಗಲಿ, ಅಥವಾ ಸ್ವತಃ ಪರಿಶೀಲನೆಗಾಗಿ ಸಿದ್ಧ. ಆದರೆ ಅದಕ್ಕೆ ಶಾಸಕರು ಅನುಮತಿ ಕೊಡಬೇಕು. ಅಲ್ಲದೆ, ಮರವನ್ನು ಡಿಪೋಗಲ್ಲದೆ ಹೊರಗಡೆ ಸಾಗಿಸಲಾಗಿರುವ ಬಗ್ಗೆ ಯಾವುದೇ ರೀತಿಯ ಸುಳಿವನ್ನು ಯಾರಾದರೂ ಕೊಟ್ಟರೆ ತನಿಖೆ ಮಾಡುತ್ತೇನೆ. ಜೊತೆಗೆ, ಈಗಾಗಲೇ ಈ ಪ್ರಕರಣದಲ್ಲಿ ಕಾಡು ನಾಶ, ಪರಿಸರ ನಾಶ ಮುಂತಾದ ಮೂಲಭೂತ ಪ್ರಶ್ನೆಗಳನ್ನೆತ್ತಿರುವುದರಿಂದ, ಯಾರ್‍ಯಾರು ಯಾವ್ಯಾವ ರೀತಿಯಲ್ಲಿ ಇಂಥ ಚಟುವಟಿಕೆಗಳನ್ನು ನಡೆಸುತ್ತಿದ್ದಾರೋ ಅವೆಲ್ಲವನ್ನೂ ತನಿಖೆ ಮಾಡುತ್ತೇನೆ. ಇದಕ್ಕೆಲ್ಲ ಎರಡು ವಾರಗಟ್ಟಲೆ ಸಮಯ ಹಿಡಿದರೂ ಚಿಂತೆಯಿಲ್ಲ" ಎನ್ನುತ್ತಾರೆ.

ಒಟ್ಟಿನಲ್ಲಿ ಜಂಟಿ ಸ್ಥಳ ತನಿಖೆ ಅಥವಾ ಉನ್ನತ ಮಟ್ಟದ ತನಿಖೆ ... ಸತ್ಯಾಂಶಗಳು ... "ಚೆಂಡು ಶಾಸಕರ ಅಂಗಣದಲ್ಲಿದೆ."

ನೀರು ಸಂಗ್ರಹ - ಸರಬರಾಜು ವ್ಯವಸ್ಥೆ ಸುಧಾರಿಸದಿರುವುದು ಕೊಪ್ಪದ ನೀರಿನ ಸಿಬ್ಬಂದಿ - ಕೌನ್ಸಿಲರ್ ಘರ್ಷಣೆಗೆ ಮೂಲ

ಮಾರ್ಚ್ 5 ರಂದು ಕೊಪ್ಪ ಪುರಸಭೆಯಲ್ಲಿ ಸದಸ್ಯ ಶ್ರೀನಿವಾಸ ಶೆಟ್ಟರಿಗೂ ಇತರ ಸಿಬ್ಬಂದಿಗೂ ಘರ್ಷಣೆ. ಬೈಗಳ 'ಇತ್ಯಾದಿ'ಗಳ ವಿನಿಮಯ! ಠಾಣೆಗೆ ದೂರು–ಪ್ರತಿ ದೂರು. ಸಿಬ್ಬಂದಿಯ ಮುಷ್ಕರದ ಸಿದ್ಧತೆ–ಮುಂದೂಡಿಕೆ. ಕೊನೆಗೆ ಪ್ರಧಾನರು, ಬಿಡಿಒ ಮುಂತಾದವರ ಮಧ್ಯಸ್ಥಿಕೆಯಲ್ಲಿ ಸಂಧಾನ. ಆದರೂ ಅಸಮಾಧಾನ ತಿಳಿಗೊಂಡಿಲ್ಲ ಎಂಬುದು ಎದ್ದು ಕಾಣುತ್ತಿದೆ.

ಅಂದು ಶ್ರೀನಿವಾಸ ಶೆಟ್ಟರು ನೀರು ಪೂರೈಕೆ ಸಿಬ್ಬಂದಿಗೆ ತಿಳಿಸದೆಯೇ, ನೀರಿನ ವಾಲ್ವ್ ತಿರುಗಿಸಿ 'ತಮಗೆ ಬೇಕಾದವರಿಗೆ' ನೀರು ಬಿಡುತ್ತಿದ್ದುದನ್ನು ಸಿಬ್ಬಂದಿ ನೋಡಿ, ಕಾರ್ಯದರ್ಶಿಯವರ ಗಮನಕ್ಕೆ ತರಲಾಗಿ, ಅವರು ಶೆಟ್ಟರಿಗೆ ಫೋನ್ ಮಾಡಿ ಹೀಗೆಲ್ಲ ಮಾಡಿದರೆ ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆ ಎಂದಾಗ ಶೆಟ್ಟರು, ಹಲವು ಮಂದಿ ನಾಗರಿಕರನ್ನು ಕರೆ ತಂದು ಕಛೇರಿಗೆ ಮುತ್ತಿಗೆ ಹಾಕಿ, ನೀರು ಸರಬರಾಜಿನ ನಾಗಯ್ಯ ಎಂಬ ಹರಿಜನ ನೌಕರನ ಮೇಲೆ ಕೈ ಮಾಡಿದರೆಂದು ಸಿಬ್ಬಂದಿಯ ದೂರು.

ಇದಕ್ಕೆ ಪ್ರತಿಯಾಗಿ, "ಮೂರ್‍ನಾಲ್ಕು ದಿನಗಳಿಂದ ಕೆಳಪೇಟೆಯ ಕೆಲವೆಡೆ ನೀರು ಬಂದಿರಲಿಲ್ಲ. ನೀರು ಬಿಡುವ ನೌಕರನನ್ನು ಎಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ಹೀಗಾಗಿ ನಾನೇ ನೀರು ತಿರುಗಿಸಿ ಬಿಟ್ಟದ್ದಕ್ಕೆ ಇವರೆಲ್ಲ ಗಲಾಟೆ ತೆಗೆದರು. ಆಗ ಜನರೇ ನನ್ನೊಂದಿಗೆ ಕಛೇರಿಗೆ ಬಂದಾಗ, ಸದರಿ ನೌಕರ ನಾಗಯ್ಯ ಮುಂತಾದವರು 'ನೀನು-ತಾನು' ಮುಂತಾಗಿ ಅಗೌರವದಿಂದ ಮಾತಾಡಿ ಜಗಳ ತೆಗೆದು ನನ್ನ ಮೇಲೇ ಕೈ ಮಾಡಲು ಬಂದರು ...." ಎನ್ನುತ್ತಾರೆ ಶೆಟ್ಟರು.

ಹಗಲೂ–ರಾತ್ರಿ ಶ್ರಮ

ಶ್ರೀನಿವಾಸ ಶೆಟ್ಟರು ಮೂರ್‍ನಾಲ್ಕು ವರ್ಷದಿಂದಲೂ ಪಟ್ಟಣದ ನೀರು ಪೂರೈಕೆಯ ಉಸ್ತುವಾರಿ ಹೊತ್ತುಕೊಂಡಿದ್ದಾರೆ. ಇರುವ ದೋಷಪೂರಿತ ವ್ಯವಸ್ಥೆಯಲ್ಲೇ ಬಹು ಮಟ್ಟಿಗೆ ಸಮರ್ಪಕ ನೀರು ಪೂರೈಕೆ ನಡೆಸಿದ್ದಾರೆ. ರಾತೋ ರಾತ್ರಿ ಯಾರ್‍ಯಾರದೋ ವಾಹನ ಎರವಲು ಪಡೆದುಕೊಂಡು ಘಾಟಿ ಪಂಪ್ ಹೌಸ್ ಮತ್ತು ಹರಿಹರಪುರ ಹೊಳೆವರೆಗೂ ಹೋಗಿ–ಬಂದು, ನೀರೆತ್ತುವ ಕೆಲಸದಲ್ಲಿ ವ್ಯತ್ಯಯವಾಗದಂತೆ ಬಹಳ ಕಷ್ಟಪಟ್ಟಿದ್ದಾರೆ.

"ಬೇಜವಾಬ್ದಾರಿ"

ಬಹಳ ಸಮಯದಿಂದಲೂ ಆವರದು ದೂರು ಒಂದೇ–ನೀರು ಪೂರೈಕೆ ಸಿಬ್ಬಂದಿ ಜವಾಬ್ದಾರಿಯಿಂದ ಕೆಲಸ ಮಾಡುವುದಿಲ್ಲ. ನೀರಿನ ಪಂಪ್ ಚಾಲೂ ಮಾಡಿ ಪಂಪ್ ಹೌಸ್‌ಗಳಲ್ಲಿ ನಿದ್ದೆ ಹೋಗಿಬಿಡುತ್ತಾರೆ. ಪೇಟೆಯಲ್ಲೂ ಬೇಕಾ ಬಿಟ್ಟಿ ನೀರು ಬಿಡುತ್ತಾರೆ. ಮನೆ ಕಟ್ಟಿಸುವವರ ಹತ್ತಿರ ದುಡ್ಡು ತಿಂದು ರಾತ್ರಿಯೆಲ್ಲಾ ನೀರು ಬಿಡುತ್ತಾರೆ. ಟ್ಯಾಂಕಿಗಳು ತುಂಬಿ ಹರಿಯುತ್ತವೆ. ಇನ್ನೊಂದೆಡೆ ಜನ ಒಂದು ಕೊಡ ನೀರಿಗಾಗಿ ಹಾಹಾಕಾರ ಪಡುತ್ತ, ಇಂಥ ನೀರಿನ ಪೋಲನ್ನು ಕಂಡು ನಮ್ಮನ್ನು ದೂರುತ್ತಾರೆ. ಈ ಸಿಬ್ಬಂದಿಗೆ ಹೆಚ್ಚು ಹೇಳಿದರೆ, ತಂಟೆಗೆ ತೆಗೆದುಕೊಂಡರೆ ಮುಷ್ಕರ ಮಾಡುತ್ತಾರೆ—ಮುಂತಾಗಿ.

ವಾಸ್ತವಿಕ ದೂರುಗಳು

ಈ ಸಮಸ್ಯೆಗಳಲ್ಲಿ ಸತ್ಯಾಂಶವಿದೆ. ಕಳೆದ 3–4 ವಾರಗಳಿಂದಲೂ ಪೇಟೆಯ ಅಲ್ಲಲ್ಲಿ 2–3 ದಿನ ನೀರು ಬಂದಿಲ್ಲವೆಂಬ ದೂರುಗಳು ಕೇಳಿ ಬರುತ್ತಿವೆ. ಮೇಲ್ಕಂಡ ರಾದ್ಧಾಂತ–ರಾಜಿ ಆಗಿ 1 ವಾರದ ನಂತರವೂ, ಬಸ್ ಸ್ಟ್ಯಾಂಡ್ ಪ್ರದೇಶದಲ್ಲಿ ನೀರು 2–3 ದಿನದಿಂದಲೂ ಬಂದಿಲ್ಲ ಎಂಬ ದೂರು ಕೇಳಿ ಬಂತು. ಘಾಟಿಯ ಪಂಪ್ ಹೌಸ್‌ಗಳಲ್ಲಿ ನೀರು ಉಕ್ಕಿ ಹರಿದು ಹೋಗುವುದನ್ನು ಎಷ್ಟೋ ಜನ ನೋಡಿದ್ದಿದೆ.

ಸಿಬ್ಬಂದಿಯ ಸಮಸ್ಯೆಗಳೇನಿದ್ದರೂ, ಅಮೂಲ್ಯವಾದ ನೀರು ಪೋಲಾಗದಂತೆ ಅವರು ಕಾಳಜಿ ವಹಿಸಬೇಕೆಂಬುದರಲ್ಲಿ ಎರಡು ಮಾತಿಲ್ಲ. ಕರೆಂಟ್ ಇಲ್ಲದೆಯೋ, ಯಂತ್ರದ ದೋಷದಿಂದಲೋ ನೀರು ಬಾರದಿದ್ದರೆ ಆಕ್ಷೇಪಕ್ಕಿಂತ, ನೀರು ಪೋಲಾಗುವುದು ಕಂಡರೆ ಆಕ್ಷೇಪ ಜಾಸ್ತಿ. ಇದರಲ್ಲಿ ಅವರು ಸಂಬಂಧಪಟ್ಟ ಕೌನ್ಸಿಲರ್ ಜೊತೆ ಬಹಳ ಹೊಂದಿಕೊಳ್ಳುವ ಅಗತ್ಯವಿದೆ. ಅವರ ಸಮಸ್ಯೆಗಳಿದ್ದರೆ ಅವನ್ನು ಬಗೆಹರಿಸುವುದು ಪುರಸಭೆ ಸಾಮರ್ಥ್ಯಕ್ಕೆ, ವ್ಯಾಪ್ತಿಗೆ ಮೀರಿದ್ದಾದ ಪಕ್ಷದಲ್ಲಿ ಅದಕ್ಕೆ ಬಹಳ ಕಾಲವೇ ಹಿಡಿಸೀತು. ಅದಕ್ಕವರು ಕರ್ತವ್ಯ ಚ್ಯುತಿ ಮಾಡಿದರೆ ಸರಿಯಲ್ಲ.

ಪ್ರೀತಿ, ಸೌಹಾರ್ದ, ಹೊಂದಾಣಿಕೆ

ಸದಸ್ಯರುಗಳಾದರೂ ಅಷ್ಟೇ. ಕಟ್ಟುನಿಟ್ಟಾಗಿ ಕೆಲಸ ಮಾಡಿಸುವುದು, ಕರ್ತವ್ಯ ಲೋಪಕ್ಕೆ ತರಾಟೆಗೆ ತೆಗೆದುಕೊಳ್ಳುವುದು ಒಪ್ಪಬಹುದಾದರೂ ಅತಿರೇಕ ಎನ್ನುವ ಮಟ್ಟಕ್ಕೆ ಹೋಗದಿರುವುದು, ಬಹಳ ಕಷ್ಟಕರ ಪರಿಸ್ಥಿತಿಗಳಲ್ಲಿ ಕೆಲಸ ನಿರ್ವಹಿಸಬೇಕಾಗಿರುವ ನೀರು ಪೂರೈಕೆ ಸಿಬ್ಬಂದಿಯ ಜೊತೆ ಪ್ರೀತಿ–ಸೌಹಾರ್ದ ರೂಢಿಸಿಕೊಳ್ಳುವುದು ಅಗತ್ಯ. ಇದು ಕಷ್ಟ ಸಾಧ್ಯವಾದರೂ ಯುಕ್ತವಾದುದು.

ಆದರೆ ಸಮಸ್ಯೆ ಇಷ್ಟಕ್ಕೇ ಬಗೆಹರಿಯುವುದಿಲ್ಲ. ಸಮಸ್ಯೆಯ ಮೂಲವಿರುವುದೇ ಬೇರೆ ಪ್ರಶ್ನೆಯಲ್ಲಿ. ಅದನ್ನು ಬಗೆಹಂಸದೆ ಪಟ್ಟಣದ ನೀರಿನ ಸಮಸ್ಯೆ ನೀಗುವುದಿಲ್ಲ; ಇಂಥ ಘರ್ಷಣೆಗಳೂ ತಪ್ಪುವುದು ಕಷ್ಟ.

ಸಮಸ್ಯೆಯ ಮೂಲ

ನಿಜವಾದ ಸಮಸ್ಯೆಯಿರುವುದು ಇಡೀ ನೀರು ಪೂರೈಕೆ ವ್ಯವಸ್ಥೆಯಲ್ಲಿ. 1975 ಕ್ಕೂ ಹಿಂದೆಯೇ ರೂಪಿತವಾದ, ಹರಿಹರಪುರ ಹೊಳೆಯಿಂದ ನೀರೆತ್ತುವ ಯೋಜನೆಯಲ್ಲೇ ಕೆಲವು ದೋಷಗಳು ಉಳಿದುಕೊಂಡಿವೆ ಜೊತೆಗೆ ಈ 15 ವರ್ಷಗಳಲ್ಲಿ ನೀರು ಸಂಗ್ರಹಣಾ ಸಾಮರ್ಥ್ಯ ಹೆಚ್ಚಾಗಿಲ್ಲ; ಹಿಂದಿನಂತೆ 1 ಲಕ್ಷ ಗ್ಯಾಲನ್‌ಗಳಿಗೇ ಸೀಮಿತಗೊಂಡಿದೆ. ರಾತ್ರಿಯಿಡೀ ಕಷ್ಟಪಟ್ಟರೆ ಸಂಗ್ರಹಿಸಬಹುದಾದ ಇಷ್ಟು ನೀರು ಪಟ್ಟಣದ ಇಡೀ ದಿನದ ಅಗತ್ಯಕ್ಕೆ ಸಾಕಾಗುತ್ತಿಲ್ಲ.

ನೀರು ವಿತರಣೆ ಜಾಲವೂ ಅಷ್ಟೇ. 15–20 ವರ್ಷದ ಹಿಂದೆ ಸುಮಾರು 200–300 ನಲ್ಲಿ ಸಂಪರ್ಕಗಳಿದ್ದಾಗ ಆಳವಡಿಸಿದ 2 ಅಂಗುಲದ ಪೈಪ್‌ಗಳಲ್ಲೇ ಈಗಲೂ ನೀರು ವಿತರಣೆಯಾಗಬೇಕಾಗಿದೆ. (ಇತ್ತೀಚೆಗೆ ಅಳವಡಿಸಿದ ಒಂದೆರಡು ಲೈನ್‌ಗಳಲ್ಲಿ ಮಾತ್ರ 3 ಅಂಗುಲದ ಪೈಪ್‌ಗಳಿವೆ.) ಆದರೆ ನಲ್ಲಿ ಸಂಪರ್ಕಗಳ ಸಂಖ್ಯೆ ಈಗ 650 ದಾಟಿದ್ದು, ವರ್ಷಕ್ಕೆ ಇನ್ನೂ 60–70 ಸಂಪರ್ಕಗಳು ಹೆಚ್ಚುತ್ತಲೇ ಇವೆ ಈಗ ಇರುವ ಸಾಮರ್ಥ್ಯ ಮತ್ತು ವಿತರಣೆ ವ್ಯವಸ್ಥೆಯಲ್ಲಿ ಎಲ್ಲ ಕಡೆ ಕನಿಷ್ಠ ಅರ್ಧ ಗಂಟೆ ನೀರು ಬಿಡಬೇಕೆಂದರೂ ಸಂಜೆ 5 ಗಂಟೆಯವರೆಗೂ ಪೂರ್ತಿ ಪಟ್ಟಣ ಪೂರೈಸಲು ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ ಪುರಸಭೆ ಕಾರ್ಯದರ್ಶಿ.

ಹೀಗೆ, ದಿನಕ್ಕೆ ಒಂದು ಹೊತ್ತು ಕೇವಲ ಅರ್ಧ ಗಂಟೆ ಬರುವ ನೀರೂ

(3ನೇ ಪುಟಕ್ಕೆ)

ಎಸ್. ಎಸ್. ಎಲ್. ಸಿ. ಪರೀಕ್ಷಾರ್ಥಿಗಳಿಗಾಗಿ ಜೀವ ಶಾಸ್ತ್ರದ ಲಘು ಪ್ರಶ್ನೋತ್ತರಗಳು

● ಕೆ. ಎಸ್. ರಾಮಕೃಷ್ಣ ಉಡುಪ

(ಮುಂದುವರಿದುದು)

1 ಪ್ರ : 'ಪ್ಲಾಸೆಂಟ' ಎಂದರೇನು ? ಅದರ ಎರಡು ಕಾರ್ಯಗಳನ್ನು ತಿಳಿಸಿ. (2)

ಉ : ಗರ್ಭಕೋಶದ ಗೋಡೆಯಲ್ಲಿ ಬಿಲ್ಲೆಯಾಕಾರದಲ್ಲಿರುವ ಹೊಕ್ಕುಳ ಹುರಿಯ ತುದಿ ಭಾಗವೆ ಪ್ಲಾಸೆಂಟ. ಕಾರ್ಯ :– ತಾಯಿಯ ಶರೀರದಿಂದ ಭ್ರೂಣದ ಶರೀರಕ್ಕೆ ಆಹಾರ ಮತ್ತು ಆಮ್ಲಜನಕವನ್ನು ಸರಬರಾಜು ಮಾಡುವುದು ; ಭ್ರೂಣದ ಶರೀರದಲ್ಲಿ ಉಂಟಾದ ತ್ಯಾಜ್ಯ ವಸ್ತುಗಳನ್ನು ವಿಸರ್ಜನೆಗಾಗಿ ತಾಯಿಯ ಶರೀರಕ್ಕೆ ಸರಬರಾಜು ಮಾಡುವುದು.

2 'ಋತು ಚಕ್ರ' ಎಂದರೇನು? ಅದರ ಅವಧಿ ಎಷ್ಟು ದಿನಗಳು ? $1\frac{1}{2}$

ಉ : ಸ್ತ್ರೀಯರ ಲೈಂಗಿಕ ಆವರ್ತನೆಗೆ ಋತುಚಕ್ರ ಎಂದು ಹೆಸರು. ಅವಧಿ 28 ದಿನಗಳು.

3 ತದ್ರೂಪ ಅವಳಿಗಳು ಸಂಪೂರ್ಣವಾಗಿ ಪರಸ್ಪರ ಹೋಲಲು ಕಾರಣವೇನು? 1

ಉ : ತದ್ರೂಪ ಅವಳಿಗಳು ಒಂದೇ ಸೈಗೋಟಿನಿಂದ ಉಂಟಾಗಿದ್ದು ಒಂದೇ ಸಮನಾದ ಆನುವಂಶೀಯ ಗುಣಗಳನ್ನು ಹೊಂದಿರುತ್ತವೆ.

4 ನಂಜು ನಾಶಕಗಳೆಂದರೇನು ? ಎರಡು ಉದಾಹರಣೆ ಕೊಡಿ. 2

ಉ : ಗಾಯದಲ್ಲಿರುವ ರೋಗಾಣುಗಳನ್ನು ನಾಶ ಮಾಡಲು ಉಪಯೋಗಿಸುವ ರಾಸಾಯನಿಕ ವಸ್ತುಗಳೆ ನಂಜು ನಾಶಕಗಳು. ಉದಾ :– ಕಾರ್ಬಾಲಿಕ್ ಆಮ್ಲ, ಹೈಡ್ರೊಜನ್ ಪರಾಕ್ಸೈಡ್.

5 ಜೀವ ನಿರೋಧಕಗಳೆಂದರೇನು? ಕ್ಷಯ ರೋಗಕ್ಕೆ ಉಪಯೋಗಿಸುವ ಜೀವ ನಿರೋಧಕ ಯಾವುದು? $1\frac{1}{2}$

ಉ : ಒಂದು ಸೂಕ್ಷ್ಮಾಣು ಜೀವಿಯು ಮತ್ತೊಂದು ಸೂಕ್ಷ್ಮಾಣು ಜೀವಿಯನ್ನು ನಾಶ ಪಡಿಸಲು ಉತ್ಪತ್ತಿ ಮಾಡುವ ರಾಸಾಯನಿಕ ವಸ್ತುವೆ ಜೀವನಿರೋಧಕ. ಔಷಧಿ :– ಸ್ಟ್ರೆಪ್ಟೋಮೈಸಿನ್.

6 ಗಳಿಸಿದ ರೋಗ ನಿರೋಧ ಶಕ್ತಿಯ ಎರಡು ವಿಧಗಳಾವುವು ? 1

ಉ : ಗಳಿಸಿದ ಸಕ್ರಿಯ ನಿರೋಧತೆ; ಗಳಿಸಿದ ನಿಷ್ಕ್ರಿಯ ನಿರೋಧತೆ.

7 ಪಾಶ್ಚರನು ಮಾನವ ಜನಾಂಗಕ್ಕೆ ಕೊಟ್ಟ ಮೂರು ಕೊಡುಗೆಗಳನ್ನು ತಿಳಿಸಿ. 1

ಉ : ರ್‍ಯಾಬೀಸ್ ಖಾಯಿಲೆಗೆ ಮದ್ದನ್ನು ಕಂಡು ಹಿಡಿದನು ; ಅಣು ಜೀವಿಗಳನ್ನು ನಾಶಪಡಿಸಲು ಪಾಶ್ಚರೀಕರಣ ವಿಧಾನವನ್ನು ಕಂಡು ಹಿಡಿದನು; ಫೆಬ್ರಿನ್ ಖಾಯಿಲೆ ಬಾರದಂತೆ ರೇಷ್ಮೆ ಹುಳುಗಳನ್ನು ರಕ್ಷಿಸುವ ವಿಧಾನವನ್ನು ಕಂಡು ಹಿಡಿದನು.

8 ಅಣು ಜೀವಿಗಳ ಚಟುವಟಿಕೆಗಳನ್ನು ಬಳಸಿಕೊಂಡಿರುವ ನಾಲ್ಕು ಕೈಗಾರಿಕೆಗಳನ್ನು ತಿಳಿಸಿ. 2

ಉ : ಆಲ್ಕೊಹಾಲ್ ತಯಾರಿಕೆ ; ಸೆಣಬು ನಾರಿನ ಕೈಗಾರಿಕೆ ; ಜೀವ ನಿರೋಧಕಗಳ ತಯಾರಿಕೆ ; ಬ್ರೆಡ್ ತಯಾರಿಕೆ.

9 ಇವುಗಳನ್ನು ಹೆಸರಿಸಿ. $2\frac{1}{2}$

ಎ) ತತ್ತಿಯು ಫಲಿತಗೊಳ್ಳುವ ಗರ್ಭಾಶಯದ ಭಾಗ.

ಬಿ) ಮಲೇರಿಯ ಕಾರಕ ರೋಗಾಣು.

ಸಿ) ಪೆನಿಸಿಲಿನ್ ಕಂಡು ಹಿಡಿದ ವಿಜ್ಞಾನಿ.

ಡಿ) ರೋಗಾಣುಗಳನ್ನು ಕಬಳಿಸಿ ನಾಶಪಡಿಸುವ ರಕ್ತದ ಜೀವಕೋಶಗಳು.

ಇ) ನಿದ್ರಾ ರೋಗವನ್ನು ಹರಡುವ ಪ್ರಾಣಿ

ಉ : ಎ) ಫೆಲೋಪಿಯನ್ ನಾಳ.

ಬಿ) ಪ್ಲಾಸ್ಮೋಡಿಯಂ.

ಸಿ) ಅಲೆಗ್ಸಾಂಡರ್ ಫ್ಲೆಮಿಂಗ್.

ಡಿ) ಬಿಳಿ ರಕ್ತ ಕಣಗಳು.

ಇ) ಟ್ಸೆಟ್ಸೆ ನೊಣ (Tse-tse fly)

(ಮುಂದುವರಿಯುವುದು)

ಕೊಪ್ಪದ ನೀರಿನ ಸಿಬ್ಬಂದಿ-ಕೌನ್ಸಿಲರ್ ಘರ್ಷಣೆಗೆ ಮೂಲ ....

(2ನೇ ಪುಟದಿಂದ)

ಶುದ್ಧವಾದುದಲ್ಲ; ಕನಿಷ್ಠ ಪಕ್ಷ ಸೋಸಿದ್ದೂ ಅಲ್ಲ. ಎಲ್ಲ ತರದ ಕೊಳೆ-ಕಶ್ಮಲ, ಹುಳು-ಹುಪ್ಪಟೆಗಳೂ ನಲ್ಲಿ ನೀರಿನೊಂದಿಗೆ ಬರುತ್ತವೆ. "ಈ ಊರಿಗೆ ಇನ್ನೂ ಕಾಲರಾ ರೋಗ ಏಕೆ ಬಂದಿರಗಿಲ್ಲ ಎಂಬುದೇ ಆಶ್ಚರ್ಯ" ಎಂಬ ಇಲ್ಲಿನ ವೈದ್ಯರೊಬ್ಬರ ಮಾರ್ಮಿಕ ನುಡಿ ಯಾವಾಗಲೂ ನೆನಪಾಗುತ್ತಿರುತ್ತದೆ.

ಸಮಗ್ರ ಯೋಜನೆ ಬೇಕು

ಹೀಗಾಗಿ, ಸಂಗ್ರಹಣಾ ಸಾಮರ್ಥ್ಯದ ಗಣನೀಯ ಹೆಚ್ಚಳ (ತಕ್ಷಣಕ್ಕೆ ಕನಿಷ್ಠ ಇನ್ನೂ 1 ಲಕ್ಷ ಗ್ಯಾಲನ್), ನೀರು ಸೋಸುವ ವ್ಯವಸ್ಥೆ, ಹಾಗೂ ಹೆಚ್ಚುವರಿ ವಿತರಣಾ ಕೊಳವೆಗಳು ಮತ್ತು ನಿಯಂತ್ರಣ ವಾಲ್ವ್‌ಗಳು-ಇವಿಷ್ಟನ್ನೂ ಒಳಗೊಂಡ ಹೊಸತೊಂದು ಸಮಗ್ರ ಅಭಿವೃದ್ಧಿ ಯೋಜನೆ ಕೊಪ್ಪಕ್ಕೆ ಅತ್ಯಗತ್ಯವಾಗಿ ಬೇಕಿದೆ.

ಹೆಚ್ಚುವರಿ 1 ಲಕ್ಷ ಗ್ಯಾಲನ್ ಸಂಗ್ರಹಣೆ ಟ್ಯಾಂಕ್ ಮತ್ತು ಸೋಸುವ ತೊಟ್ಟಿಗಳಿಗಾಗಿ ಈಗ್ಗೆ 8 ವರ್ಷದ ಹಿಂದೆ ತಯಾರಾದ 10 ಲಕ್ಷ ರೂ ಯೋಜನೆ ಈವರೆಗೂ ಮಂಜೂರಾಗಲಿಲ್ಲ, ಈಗ ಅಷ್ಟೆ ಕೆಲಸಕ್ಕೇ 30 ಲಕ್ಷ ರೂ.ಗಳಿಗೂ ಹೆಚ್ಚು ಬೇಕಾಗಬಹುದು. ಇತ್ತ, ಹರಿಹರಪುರ ಹೊಳೆಯಲ್ಲಿ 65 ಅಶ್ವ ಶಕ್ತಿಯ ಪಂಪ್ ಅಳವಡಿಕೆ ಯೋಜನೆ ಮಂಜೂರಾಗಿ, ಪಂಪ್ ಬಂದಿದೆಯಾದರೂ, ಇನ್ನೂ ವಿದ್ಯುಚ್ಛಕ್ತಿ ಇಲಾಖೆಯ ಅನುಮತಿ ಮತ್ತು ಸೌಕರ್ಯ ಸಿಕ್ಕಿಲ್ಲ ಸೋಸುವ ತೊಟ್ಟಿಗಾಗಿ ಕಳೆದ ವರ್ಷವೇ ಕೇಳಿದ್ದ ಕೇವಲ ಒಂದೂವರೆ ಲಕ್ಷ ರೂ. ಹಣ ಜಿಲ್ಲಾ ಪರಿಷತ್ತಿನಿಂದ ಮಂಜೂರಾಗದೆ, "90-91ರ ಆಯವ್ಯಯದಲ್ಲಿ ನೋಡೋಣ" ಎಂಬ ಪಟ್ಟಿಗೆ ಹೋಗಿದೆ.

ಹೀಗೆ ಪಟ್ಟಣದ ಅಗತ್ಯ ಬೆಳೆದಂತೆ ಪೂರೈಕೆ ವ್ಯವಸ್ಥೆಯು ಹಿಗ್ಗುವ ಬದಲು ಇದ್ದುದರಲ್ಲೇ ಇನ್ನಷ್ಟು-ಮತ್ತಷ್ಟು ದೋಷಗಳು, ಕೊನೆಯಿಲ್ಲದ ರಿಪೇರಿಗಳು, ಮುಗಿಯದ ವಿದ್ಯುತ್ ಕಡಿತಗಳು-ಇದೇ ಆದರೆ ಪಟ್ಟಣದ ನೀರಿನ ಸಮಸ್ಯೆ ನೀಗುವುದೆಂತು? ಕಾಲ-ಕಾಲಕ್ಕೆ ಹೊಸ ಹೊಸ ಯೋಜನೆಗಳನ್ನು ರೂಪಿಸಿ, ಅವುಗಳಿಗೆ ಸರ್ಕಾರದಿಂದ ಮಂಜೂರಾತಿ ದೊರಕಿಸಿಕೊಂಡು ಬರಬಲ್ಲ ನಾಯಕರು ರೂಪುಗೊಳ್ಳುವುದು ಯಾವಾಗ?

ಅನಾಗರಿಕ ಬಳಕೆದಾರರು

ಇನ್ನು ನಮ್ಮ ನೀರು ಬಳಕೆದಾರರ 'ನಾಗರಿಕ' ವರ್ತನೆ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಬೀದಿ ನಲ್ಲಿ ಸುರಿದು ಹೋಗುತ್ತಿರುವುದನ್ನು ನೋಡಿದರೂ ಯಾರೂ ನಿಲ್ಲಿಸುವುದಿಲ್ಲ. ಹಾಗೆ ನೀರು ಪೋಲು ಮಾಡುವವರಿಗೆ ಯಾರಾದರೂ ತಾಕೀತು ಮಾಡಿದರೆ 'ನಿಮಗೇನ್ರಿ ?' ಎಂಬ ಉದ್ಧಟತನ. ಆಗ ಸುತ್ತಮುತ್ತಲವರೂ (ನೋಡಿದವರು, ಕೇಳಿದವರು) ಧ್ವನಿಗೂಡಿಸಿದರೆ ಪ್ರಯೋಜನವಾದೀತು. ಆದರೆ, 'ನಮಗ್ಯಾಕೆ?' ಎಂಬ ಉದಾಸೀನ. ನಮಗೇ ನೀರು ಕೊರತೆಯಾದರೆ? ಎಂಬ ಅಂಕೆಜಿಯಿಲ್ಲವೆ-ಎಂದರೆ, 'ಪುರಸಭೆಯನ್ನು ಕೇಳಿದರಾಯಿತಲ್ಲ!' ಅಲ್ಲಲ್ಲಿ ಪೈಪ್ ಒಡೆದು ನೀರು ಪೋಲಾಗುವುದೂ ಇದೆ.

ಇನ್ನು ತಮ್ಮ ತಮ್ಮ ಮನೆಗಳಲ್ಲೂ ಅಷ್ಟೆ. ತಿರುಗಿಸಿಟ್ಟ ನಲ್ಲಿಗಳನ್ನು ಬಂದ್ ಮಾಡುವ ಪರಿಪಾಠವೇ ಬಹಳ ಜನಕ್ಕಿಲ್ಲ. ರಾತ್ರಿಯಲ್ಲಿ (ಕೆಲವೊಮ್ಮೆ ಹಗಲು ಕೂಡ) ಅಮೂಲ್ಯ ಜೀವನಾಧಾರ ದ್ರವ್ಯ ...ಯು ನೀರಾಗಿ ಚರಂಡಿಯಲ್ಲಿ ಹರಿದುಹೋಗುತ್ತಿರುತ್ತದೆ. ಕೇಳುವವರಿಲ್ಲ. (ಕೇಳಿದರೂ ಮರ್ಯಾದೆ ಬರುವ ನಂಬಿಕೆಯಿಲ್ಲ!)

ಇದೇ ರೀತಿಯ ಅಪರಾಧಿಗಳು ಮನೆ ಕಟ್ಟುವ ಜನ. ಅವರಲ್ಲಿ ಬಹಳಷ್ಟು ಮಂದಿಗೆ ನೀರಿನ ಬಗ್ಗೆ ಎಗ್ಗಿಲ್ಲ. ಟ್ಯಾಂಕಿಗೆ ತೆರೆದ ಪೈಪುಗಳು. ನಲ್ಲಿ ಅಳವಡಿಸಿದರೆ ಕದ್ದು ಹೋಗುತ್ತೆ, ನಿಜ. ಆದರೆ ಯಾವ ಹೊತ್ತಲ್ಲಿ ನೀರು ಬಿಡುತ್ತಾರೆ ನೋಡಿಕೊಂಡು ಕಾದಿದ್ದು, ಟ್ಯಾಂಕಿಗಳು ತುಂಬಿದ ನಂತರ ಪೈಪಿಗೊಂದು ಬೂಚಿಯನ್ನಾದರೂ (ಗಿಡ್ಡ) ಹಾಕಿ ಹೋಗಬಾರದೆ? ಸಿಮೆಂಟ್ ಕಟ್ಟಡಕ್ಕೆ ನೀರು ಹನಿಸುವಲ್ಲೂ (ಕ್ಯೂರಿಂಗ್) ಅಷ್ಟೆ. "ಇಡೀ ಕೆಳಪೇಟೆಗೆ ಒಂದೊಂದು ದಿನಕ್ಕೆ ಸಾಕಾಗುವಷ್ಟು ನೀರನ್ನು ಒಂದೊಂದು ಕಟ್ಟಡಕ್ಕೆ ಧಡಧಡನೆ ಸುರಿಯುತ್ತಾರೆ-ಅದೂ ದಿನಕ್ಕೆ ಮೂರ್‍ನಾಲ್ಕು ಸಲ" ಎಂದು ಒಬ್ಬರು ವ್ಯಥೆ ಪಡುತ್ತಿದ್ದರು.

(ನಾವು ಮನೆ ಕಟ್ಟುವಾಗ, ನೀರು ಬಿಡುವ ವೇಳೆಯನ್ನು ಪದೇ ಪದೇ ಬದಲಾಯಿಸುತ್ತಿದ್ದರೂ ನಾವು ರಾತ್ರಿ 12 ಗಂಟೆಗೋ ಬೆಳಗಿನ ಜಾವ 4 ಗಂಟೆಗೋ ಕಟ್ಟಡದ ಬಳಿ ಕಾದಿದ್ದು, ಟ್ಯಾಂಕಿ ತುಂಬಿದ ನಂತರ ಪೈಪ್ ಬಂದ್ ಮಾಡುತ್ತಿದ್ದೆವು. ಒಂದು ದಿನವೂ ನಮ್ಮ ಟ್ಯಾಂಕ್ ಉಕ್ಕಿ ಹರಿದುದಿಲ್ಲ. ಕ್ಯೂರಿಂಗ್ ಮಾಡುವಾಗಲೂ ನೀರು ಎರಚುವುದು ಹೊರತು ಧಡಧಡ ಸುರಿಯುತ್ತಿರಲಿಲ್ಲ. ತೀರಾ ಹೆಚ್ಚು ಪ್ರಮಾಣದ ನೀರು ಬೇಕಾದಾಗ ಹಳ್ಳದಿಂದ ತರಿಸಿ ಟ್ಯಾಂಕ್ ತುಂಬಿಸಿಕೊಳ್ಳುತ್ತಿದ್ದೆವು.

ನಮ್ಮ ಎದುರುಗಡೆ ಕಟ್ಟುತ್ತಿದ್ದ ಟ್ಯಾಂಕ್ ಉಕ್ಕಿಹರಿಯುವುದನ್ನು ನೋಡಲಾಗದೆ ರಾತ್ರಿಯಾದರೂ ಎದ್ದು ಪೈಪ್ ಬಂದ್ ಮಾಡಿದ್ದಕ್ಕೆ ಲೆಕ್ಕವಿಲ್ಲ. ಮನಸ್ಸು ಮಾಡಿದರೆ ಇಷ್ಟು ಎಚ್ಚರ ಎಲ್ಲರೂ ವಹಿಸಬಹುದು.)

ಎಲ್ಲರ ಹೊಣೆಯೂ ಇದೆ

ಹೀಗೆ, ನೀರಿನ ಸಮಸ್ಯೆ ನೀಗಿಕೊಳ್ಳುವಲ್ಲಿ ಪಟ್ಟಣದ ಎಲ್ಲರಿಗೂ ಹೊಣೆಯಿದೆ. ಎಲ್ಲರೂ ಅವನ್ನರಿತು ವರ್ತಿಸಬೇಕು. ಕೇವಲ ನೀರು ಪೂರೈಕೆ ಸಿಬ್ಬಂದಿಯನ್ನು ಮಾತ್ರ 'ಬೇಜವಾಬ್ದಾರಿ'ಗೆ ದೂಷಿಸಿದರೆ ನ್ಯಾಯವಲ್ಲ. ನೀರು ಸಂಗ್ರಹಣೆ-ಪೂರೈಕೆಗೆ ಹೊಸ ಯೋಜನೆಗಳನ್ನು 'ಗೆದ್ದು' ತರುವುದು ಹಾಗೂ ಪೋಲಿಲ್ಲದ ಬಳಕೆ-ಇವೂ ತುರ್ತಿನ ಅಗತ್ಯಗಳು.

—ಸಿರಿಮನೆ ನಾಗರಾಜ್.

ನೇತ್ರ ಪರೀಕ್ಷೆ ಶಿಬಿರ

ಉತ್ತಮೇಶ್ವರ : ಇಲ್ಲಿನ ಮಹಿಳಾ ಮಂಡಳಿ ಮತ್ತು ಸ್ವಯಂ ಸೇವಾ ಕೇಂದ್ರದ ಸಹಯೋಗದಲ್ಲಿ ಆಸ್ಪತ್ರೆಯಲ್ಲಿ ಉಚಿತ ನೇತ್ರ ರೋಗ ತಪಾಸಣಾ ಶಿಬಿರ ಕೊಪ್ಪ ಆಸ್ಪತ್ರೆಯ ನೇತ್ರ ತಜ್ಞ ಡಾ|| ಬಿ. ಜಿ. ನಾಗಭೂಷಣ ಅವರಿಂದ ಫೆ. 27 ರಂದು ನಡೆಯಿತು. ನೇತ್ರ ಪರೀಕ್ಷಾ ಸಹಾಯಕ ಸ್ವಾಮಿ ಅವರೂ ಪಾಲ್ಗೊಂಡಿದ್ದರು. ಸುತ್ತಮುತ್ತಲ ಸುಮಾರು 40 ಜನ ಪ್ರಯೋಜನ ಪಡೆದರು.

ಹೊತ್ತು-ಗೊತ್ತಿಲ್ಲದೆ ವಿದ್ಯುತ್ ನಿಲುಗಡೆ

ಪ್ರಿಯರೆ,

ಜಯಪುರದಲ್ಲಿ ಸುಮಾರು ದಿನಗಳಿಂದ ಪ್ರತಿ ದಿನ ಸಂಜೆ ವಿದ್ಯುತ್ ನಿಲುಗಡೆಯಾಗುತ್ತಿದೆ ಇದರಿಂದ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಜಯಪುರದ ಅಕ್ಕಪಕ್ಕದಲ್ಲಿರುವ ಹಳ್ಳಿಗಳಿಗೂ ತೊಂದರೆಯಾಗುತ್ತಿದೆ.

ಓದುಗರ ಪತ್ರಗಳು

ಆದುದರಿಂದ ದಯವಿಟ್ಟು ವಿದ್ಯುಚ್ಛಕ್ತಿ ಮಂಡಳಿಯವರು ಜವಾಬ್ದಾರಿಯಿಂದ ಇನ್ನು ಮುಂದಾದರೂ ವಿದ್ಯುತ್ ಪೂರೈಕೆ ಸರಿಯಾಗಿ ಇರುವಂತೆ ನೋಡಿಕೊಳ್ಳಲೆಂದು ಕೋರುತ್ತೇನೆ.

—ಸೇರಿಲ್ ಡಿಸೋಜ,
ಜಯಪುರ.

ಪಲ್ಪರ್ ನಾತ : ರಕ್ಷಿಸುವವರ್‍ಯಾರು ?

ಪ್ರಿಯರೆ,

ಬೇಸಿಗೆ ಬಂದಿದೆ ಎಲ್ಲ ಕಡೆ ನೀರ ಸೆಲೆ, ತೊರೆಗಳು ಬತ್ತಿ, ನೀರಿಗಾಗಿ ಜನ, ಜಾನುವಾರುಗಳು ಹಾಹಾಕಾರ ಪಡತೊಡಗಿದ್ದಾರೆ ಆದರೆ ಇರುವ ಅಲ್ಪ ಸ್ವಲ್ಪ ನೀರಿನ ಹರಿವುಗಳೂ ದೊಡ್ಡ ದೊಡ್ಡ ಕಾಫಿ ಬೆಳೆಗಾರರ ಪಲ್ಪರ್ ಕೊಳೆಯಿಂದ ಕೊಳೆತು ನಾರತೊಡಗಿವೆ.

ಉದಾಹರಣೆಗೆ ಬಸರಿಕಟ್ಟೆ-ಜಯಪುರ ಮಾರ್ಗದಲ್ಲಿ ರಸ್ತೆ ಬದಿಯ ಜಲಪಾತ ಮತ್ತು ಎಡಗಡೆಯ ಹಳ್ಳ ಈ ಪಲ್ಪರ್ ನೀರಿನಿಂದ ಕೊಳೆತು ಕಪ್ಪಾಗಿ, ಬಸ್ಸಿನಲ್ಲಿ ಪಯಣಿಸುವವರೂ ಮೂಗಿನೊಂದಿಗೆ ಪಯಣಿಸದಂತಾಗಿದೆ. ಅದೇ ನೀರನ್ನು ಬಳಸಬೇಕಾದ ಜನ-ಜಾನುವಾರುಗಳ ಗತಿ ಏನು? ಒಂದು ವೇಳೆ ಜನ ಆ ನೀರನ್ನು ಕಡಿಮೆ ಬಳಸಿದರೂ, ಆದರಿಂದ ಉತ್ಪತ್ತಿಯಾಗುವ ಹುಳು-ಹುಪ್ಪಟೆ, ಕ್ರಿಮಿ - ಕೀಟ - ರೋಗಾಣುಗಳಿಂದ ರಕ್ಷಣೆ ಹೇಗೆ ?

21ನೇ ಶತಮಾನದ ಮುಂಚೂಣಿಯ ನಾಗರಿಕರೆನ್ನಿಸಿಕೊಳ್ಳುವ ಈ ಸಿರಿಜನರಿಗೆ ಸಾಮಾನ್ಯ ಜನರ ಪರಿವೆಯೇ ಇಲ್ಲವೆ ? ಇರುವುದಾದರೆ, ಈ ಪಲ್ಪರ್ ಕಶ್ಮಲ ನಿವಾರಣೆಗೆ ಬೇರೆ ಕಾರ್ಯಸಾಧ್ಯವಾದ ಪರಿಹಾರ ಮಾರ್ಗಗಳಿದ್ದೂ ಇವರೇಕೆ ಅದನ್ನು ಅಳವಡಿಸದೆ, ಹೀಗೆ ಸಾರ್ವಜನಿಕರಿಗೆ ಹಿಂಸೆ ನೀಡುತ್ತಾರೆ ?

ಸ್ಥಾನೀಯ ಆಡಳಿತ ವ್ಯವಸ್ಥೆಗಳಾಗಲಿ, ಪರಿಸರವಾದಿಗಳಾಗಲಿ ಈ ಮೂಕ ಜನರ ನೆರವಿಗೆ ಬಂದಾರೆ ?

—ನೊಂದ ಪಯಣಿಗ,
ಬಿಳಾಲುಕೊಪ್ಪ.

ಬಸ್ ಮಾರ್ಗ ಬದಲಿಕೆ ಅಗತ್ಯವೆ ?

ಪ್ರಿಯರೆ,

ಕೆಲವು ವರ್ಷಗಳಿಂದ ಕೊಪ್ಪ-ಶಿವಮೊಗ್ಗ ಮಾರ್ಗದ ಬಸ್‌ಗಳೆಲ್ಲವನ್ನೂ ...ಬಾಳಗಡಿ ಮೂಲಕ ಓಡಿಸುತ್ತಿದ್ದುದು ...ಸಾವಿರಾರು ಮಂದಿ ವಿದ್ಯಾರ್ಥಿ-ನಾಗರಿಕರಿಗೆ ತುಂಬಾ ಉಪಯುಕ್ತವಾಗಿತ್ತು ಆದರೆ, ಈಚೆಗೆ ಕೆಲವೇ ಜನರ ಅನುಕೂಲಕ್ಕಾಗಿ ಹಲವಾರು ಬಸ್‌ಗಳನ್ನು ರಾಘವೇಂದ್ರ ನಗರ (ಕೊಪ್ಪ ಎಸ್ಟೇಟ್) ಮಾರ್ಗವಾಗಿ ಓಡಿಸುವ ತೀರ್ಮಾನವಾಗಿದೆಯೆಂದು ತಿಳಿದು ಬಂದಿದೆ.

ಆ ಮಾರ್ಗದಲ್ಲಿರುವ ಸೇತುವೆ ಜೀರ್ಣಾವಸ್ಥೆಯಲ್ಲಿದ್ದು, ಪ್ರಾಣಾಪಾಯದ ಸಂಭವವಿಲ್ಲವೆ? ಅಲ್ಲದೆ ಮೊದಲಿನ ವ್ಯವಸ್ಥೆಯಿಂದ ಪ್ರಯೋಜನ ಹೊಂದುತ್ತಿದ್ದ ಸಾವಿರಾರು ಮಂದಿಗೆ ತೊಂದರೆಯಾಗುವುದಿಲ್ಲವೆ? ಈ ಬಗ್ಗೆ ಸಾರ್ವಜನಿಕರು ಪ್ರತಿಭಟಿಸಬೇಕಿದೆ.

ಈ ಬಗ್ಗೆ ಈಚೆಗೆ ಕೊಪ್ಪ ತಾ|| ಕಛೇರಿಯಲ್ಲಿ ಏರ್ಪಟ್ಟಿದ್ದ ಸಮಾಲೋಚನಾ ಸಭೆಯ ವಿಷಯವನ್ನು ಯಾರಿಗೂ ಪ್ರಚಾರ ಮಾಡಿರಲಿಲ್ಲ. ಸ್ಥಳೀಯ ಪ್ರಮುಖ ಕಛೇರಿ. ಸಾರ್ವಜನಿಕ ಸ್ಥಳಗಳಲ್ಲಾಗಲಿ. ಪತ್ರಿಕೆಗಳಲ್ಲಾಗಲಿ ಪ್ರಕಟಿಸಿರಲಿಲ್ಲ. ಈ ಸಭೆಗೆ ಬಂದಿದ್ದ ಚಿಕ್ಕಮಗಳೂರು ಪ್ರಾದೇಶಿಕ ಸಾರಿಗೆ ಅಧಿಕಾರಿ ಗು. ಪುಟ್ಟೇಗೌಡ ಅವರು ಸಾರ್ವಜನಿಕರ ಅಭಿಪ್ರಾಯಗಳನ್ನು ತಮಗೆ ಬರೆದು ತಿಳಿಸಲು ಅಂದು ಕೇಳಿಕೊಂಡಿದ್ದಾರೆ

—ಎಚ್. ಎ. ವಸಂತ್ ಕುಮಾರ್
ಹರಿಹರಪುರ,
ಕೊಪ್ಪ.

ಶಶಿಭೂಷಣನ ಪರಿಚಯಕ್ಕೆ ಧನ್ಯವಾದಗಳು

ಪ್ರಿಯರೆ,

ತಾ. 3-3-90 ರ ತಮ್ಮ ಪತ್ರಿಕೆಯಲ್ಲಿ ಶಂ. ನ. ಶೇಷಗಿರಿಯವರು ನನ್ನ ಮಗನಾದ ಶಶಿಭೂಷಣನ ಬಗ್ಗೆ ಬರೆದ ಲೇಖನದಿಂದ ನಮಗೆಲ್ಲ ಸಂತೋಷವಾಯಿತು ಇದು ಮುಂದೆ ಅವನ ಕಲಾ ವ್ಯಾಸಂಗಕ್ಕೂ ಸ್ಫೂರ್ತಿಯಾಗಲು ಸಾಧ್ಯ.

ಲೇಖನವನ್ನು ಪ್ರಕಟಿಸಿದ ನಿಮಗೂ, ಅದನ್ನು ಬರೆದ ಶಂ. ನ. ಶೇಷಗಿರಿಯವರಿಗೂ ಕೃತಜ್ಞತೆಗಳನ್ನು ಈ ಮೂಲಕ ಸಲ್ಲಿಸುತ್ತೇನೆ.

—ಎಂ. ಗೋಪಾಲರಾವ್,
ಸಿಗದಾಳು-ನುಗ್ಗಿಮಕ್ಕಿ.

(ಚಿ| ಶಶಿಭೂಷಣನ ಕಲೆಯ ಮೇಲಿನ ಆಸಕ್ತಿ ಕಂಡು, ವಿದ್ಯಾರ್ಥಿ ಕಾಂಚನ ವಿ. ಮೂರ್ತಿಯವರು ಅವನಿಗಾಗಿಯೇ ವಿಶೇಷವಾಗಿ ಒಂದು ಫಲಕವನ್ನು ಮಾಡಿಸಿ ತಂದು, ಪೂರ್ಣಿಯ ಪುರಂದರ-ತ್ಯಾಗರಾಜ ಆರಾಧನೋತ್ಸವದಲ್ಲಿ ಅವನಿಗೆ ಉಡುಗೊರೆಯಾಗಿ ನೀಡಿ, ಶುಭ ಹಾರೈಸಿದ್ದಾರೆಂದು ಅವನ ಕುಟುಂಬ ವರ್ಗದವರು ತಿಳಿಸಿದ್ದಾರೆ.

—ಸಂ.)

ಮಲ್ಲಂದೂರು ಗುಡ್ಡದಲ್ಲಿ ಅದಿರು ತೆಗೆಯುವ ಖಾಸಗಿ ಸಂಸ್ಥೆಯ ಪರವಾನಗಿ ರದ್ದು

ಕೊಪ್ಪ : ನ. ರಾ. ಪುರ ಅರಣ್ಯ ವಲಯದಲ್ಲಿ ಮಲ್ಲಂದೂರು ಗುಡ್ಡ ಸ್ಟೇಟ್ ಫಾರೆಸ್ಟ್‌ನಲ್ಲಿ ಮ್ಯಾಂಗನೀಸ್ ಅದಿರು ತೆಗೆಯಲು ತಾರಾನಗರ್ ಮೈನಿಂಗ್ ಕಂಪೆನಿ ಎಂಬ ಖಾಸಗಿ ಸಂಸ್ಥೆ ಪಡೆದಿದ್ದ ಪರವಾನಗಿ ರದ್ದು ಪಡಿಸಲು ಕೊಪ್ಪ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸರ್ಕಾರಕ್ಕೆ ಶಿಫಾರ್ಸು ಮಾಡಿದ್ದಾರೆ.

1970–71 ರಲ್ಲಿ 170 ಎಕರೆ ಪ್ರದೇಶದಲ್ಲಿ 20 ವರ್ಷಗಳ ಅವಧಿಗೆ ಈ ಗುತ್ತಿಗೆ ನೀಡಲಾಗಿತ್ತು. ಐದಾರು ವರ್ಷದ ಹಿಂದೆ ಸುಮಾರು 5 ಎಕರೆ ಪ್ರದೇಶದಲ್ಲಿ ಸ್ವಲ್ಪ ಅದಿರು ತೆಗೆಯಲಾಗಿತ್ತು. ಆದರೆ ಅದರ ಸಾಗಾಣಿಕೆ ಆಗಿರಲಿಲ್ಲ.

1990–91ಕ್ಕೆ ಗುತ್ತಿಗೆಯ ನವೀಕರಣಕ್ಕಾಗಿ ಸಂಸ್ಥೆ ಸರ್ಕಾರಕ್ಕೆ ಸಲ್ಲಿಸಿದ ಅರ್ಜಿಯ ಮೇಲೆ ಕೊಪ್ಪ ಡಿ ಎಫ್ ಓ ರವರ ಶಿಫಾರ್ಸ್ ಕೇಳಲಾಗಿತ್ತು. ಆದರೆ ಈ ಪ್ರದೇಶ ದಟ್ಟ ಕಾಡು ಉಳ್ಳ ಸ್ಟೇಟ್ ಫಾರೆಸ್ಟ್‌ನಲ್ಲಿದ್ದು, ತುಂಗಾ ನದಿಯ ಜಲಾನಯನ ಪ್ರದೇಶವಾದ್ದರಿಂದ ಗುತ್ತಿಗೆ ರದ್ದು ಪಡಿಸಲು ಡಿಎಫ್ಓ ಶಿಫಾರ್ಸು ಮಾಡಿದ್ದಾರೆ.

ಅಲ್ಲದೆ, ಈ ಹಿಂದೆ ಅದಿರು ತೆಗೆಯುವಾಗ ಕಾಡು ನಾಶಕ್ಕೆ ಕಾರಣವಾದ ಬಗ್ಗೆ ಸುಮಾರು 15,000 ರೂ. ಗಳ ದಂಡ ನೀಡಿದ ಕಂಪೆನಿ, ಅದಿರನ್ನು ಸರ್ಕಾರಿ ಸಾಮ್ಯದ ಭದ್ರಾವತಿ ಕಬ್ಬಿಣ ಕಾರ್ಖಾನೆಗೇ ನೀಡುವಂತೆ ಡಿಎಫ್ಓ ಆದೇಶ ಮಾಡಿದ್ದನ್ನೂ ಪಾಲಿಸಿದೆ

ಗಂಧ ಕಳ್ಳರ ಮೇಲೆ ಗುಂಡು : ಒಬ್ಬನ ಸಾವು

ಮೂಡಿಗೆರೆ : ಇಲ್ಲಿಗೆ ಸಮೀಪದ ಭಾರತೀಬೈಲು ಎಂಬಲ್ಲಿ ಫೆ. 28 ರಂದು ಗಂಧ ಸಾಗಣೆ ಕಾರೊಂದರ ಸುಳಿವು ಸಿಕ್ಕಿ ಅರಣ್ಯ ಸಿಬ್ಬಂದಿ ದಾರಿಗಡ್ಡಲಾಗಿ ಮರದ ದಿಮ್ಮಿಯೊಂದನ್ನಿಟ್ಟು ಕಾದಿದ್ದರು. ಎಂಇಜೆ 3573 ನಂಬರಿನ ಕಾರು ದಿಮ್ಮಿಯನ್ನೇ ಹತ್ತಿ ಪರಾರಿಯಾಗಲೆತ್ನಿಸಿ ವಿಫಲವಾದಾಗ ಅದರಲ್ಲಿದ್ದವರು ತಪ್ಪಿಸಿಕೊಳ್ಳಲೆತ್ನಿಸಿದರು.

ಆದರೆ ಅಷ್ಟರಲ್ಲೇ, ಗಾರ್ಡ್ ಗೋಪಾಲ್ ಕಾರಿನ ಟೈರಿಗೆಂದು ಹಾರಿಸಿದ ಗುಂಡು ಕೇರಳದ ಅಬ್ದುಲ್ ಎಂಬ ಆಪಾದಿತನ ತೊಡೆಗೆ ಬಡಿಯಿತು. ಕೂಡಲೇ ಅವನನ್ನು ಆಸ್ಪತ್ರೆಗೆ ಸಾಗಿಸಿದರೂ, ಆತ ಅಸುನೀಗಿದ. ಡ್ರೈವರ್ ಸೆರೆಯಾದ.

ಕಾರಿನಲ್ಲಿ 50 ಸಾವಿರ ರೂ. ಬೆಲೆಯ ಸುಮಾರು 600 ಕಿಲೊ ಗಂಧ ಸಿಕ್ಕಿತು. ಈಚೆಗೆ ಚಕ್ಕಮಕ್ಕಿ ಅಬ್ಬಾಸ್ ಕಡೆಯವರಿಂದ ಅಪಹರಿಸಲ್ಪಟ್ಟಿದ್ದವರೇ ಈ ಗೋಪಾಲ್. ಇದೀಗ ಇವರ ಜೀವಕ್ಕೆ ಅಪಾಯವಿದೆ ಎನ್ನಲಾಗಿದೆ.

ದಾರಿ ಸೂಚಿಸುವ ಫಲಕಗಳ ದುರವಸ್ಥೆ

ಕೊಪ್ಪ : ಹಳ್ಳಿಗಾಡಿನ ರಸ್ತೆಗಳಿಗೆ ದಾರಿ ಸೂಚಕ ಕಲ್ಲುಗಳನ್ನು ಲೋಕೋಪಯೋಗಿ ಇಲಾಖೆ ಅಥವಾ ಪಂಚಾಯ್ತಿಗಳವರು ನೆಡಿಸಿದ್ದು, ಎಲ್ಲಾ ಕಡೆ ಅವುಗಳಲ್ಲಿ ಹೆಸರು ಅಳಿಸಿ ಅಧ್ವಾನವಾಗಿದೆ. ಅಪರಿಚಿತರು ಹಳ್ಳಿ ಕಡೆ ಓಡಾಡುವುದೇ ಕಷ್ಟವಾಗಿದೆ. ಸಂಬಂಧಪಟ್ಟವರು ಇತ್ತ ಗಮನ ಹರಿಸಿದಂತೆಯೇ ಕಾಣುತ್ತಿಲ್ಲ.

ಲಯನ್ಸ್ ಅಧ್ಯಕ್ಷರಾಗಿ ರಾಮಪ್ಪಯ್ಯ

ಫೆ. 11 ರಂದು ಇಲ್ಲಿ ಮಂಗಳೂರು ಲಯನ್ಸ್ ಅಧ್ಯಕ್ಷ ಡಾ॥ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಶೃಂಗೇರಿ ಲಯನ್ಸ್ ಕ್ಲಬ್ ಸಭೆಯಲ್ಲಿ ರಾಮಪ್ಪಯ್ಯ ಅವರನ್ನು 1990–91ನೇ ಸಾಲಿಗೆ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಲಯನ್ಸ್ ಜಿಲ್ಲಾ ಗವರ್ನರ್ ಡಾ॥ ಶಿವಲಿಂಗಪ್ಪ ಉದ್ಘಾಟಿಸಿದ ಸಭೆಯನ್ನುದ್ದೇಶಿಸಿ, ರೀಜನಲ್ ಛೇರ್ಮನ್ ಡಾ॥ ಬಲ್ಲಾಳ್, ಕ್ಯಾಬಿನೆಟ್ ಸೆಕ್ರೆಟರಿ ಶಿವಶಂಕರ್, ರಾಮಪ್ಪಯ್ಯ, ಜೇಸೀಸ್‌ನ ಎ. ಸಿ. ಪಾಂಡುರಂಗ ಮಾತನಾಡಿದರು. ಉಪಾಧ್ಯಕ್ಷರುಗಳಾಗಿ ತಹಸೀಲ್ದಾರ್ ಬೋರೇಗೌಡ(1), ಡಾ॥ವಿಠಲ ಶೆಟ್ಟಿ(2), ಡಾ॥ ಮಂಜಪ್ಪ ಗೌಡ (3) ಹಾಗೂ ಕಾರ್ಯದರ್ಶಿಯಾಗಿ ಡಿಸಿಸಿ ಬ್ಯಾಂಕಿನ ಸಿದ್ಧಪ್ಪ ಇವರುಗಳು ಆಯ್ಕೆಯಾದರು.

(ವರದಿ : ಪಾಪಣ್ಣ)

ಚಿಕ್ಕಮಗಳೂರು ಕಾರ್ಮಿಕ ನ್ಯಾಯಾಲಯದ ಕಾರ್ಯಾರಂಭಕ್ಕೆ ಸಾರಿಗೆ ಕಾರ್ಮಿಕರ ಆಗ್ರಹ

ಕೊಪ್ಪ : ಮೂರು ತಿಂಗಳ ಹಿಂದೆಯೇ ಚಿಕ್ಕಮಗಳೂರಿನಲ್ಲಿ ಸ್ಥಾಪನೆಯಾಗಿರುವ ಕಾರ್ಮಿಕ ನ್ಯಾಯಾಲಯ ಕೂಡಲೇ ಕಾರ್ಯಾರಂಭ ಮಾಡಬೇಕೆಂದು ಎ.ಐ ಟಿ. ಯು ಸಿ. ನೇತೃತ್ವದ ಜಿಲ್ಲಾ ಸಾರಿಗೆ ಮತ್ತು ಇತರ ಕಾರ್ಮಿಕರ ಸಂಘ ಆಗ್ರಹಿಸಿದೆ

ರಾಜ್ಯದ ಕಾನೂನು ಮಂತ್ರಿ ವೀರಪ್ಪ ಮೊಯ್ಲಿಯವರಿಗೆ ಸಂಘದ ಪ್ರಧಾನ ಕಾರ್ಯದರ್ಶಿ ಚಿಕ್ಕೇಗೌಡ ಬರೆದಿರುವ ಪತ್ರದಲ್ಲಿ. ಚಿಕ್ಕಮಗಳೂರು ಜಿಲ್ಲೆಗೇ ಪ್ರತ್ಯೇಕವಾಗಿ ಸ್ಥಾಪಿಸಿರುವ ಈ ನ್ಯಾಯಾಲಯದ ಕಾರ್ಯಾರಂಭದ ಬಗ್ಗೆ ಕೂಡಲೇ ಸರ್ಕಾರಿ ಪ್ರಕಟಣೆ ಹೊರಡಿಸಿ, ಬಹು ಕಾಲದಿಂದಲೂ ಇತ್ಯರ್ಥವಾಗದೆ ನೊಂದ ಕಾರ್ಮಿಕರ ಜೀವ ಹೀರುತ್ತಿರುವ ಕಾರ್ಮಿಕ ವಿವಾದಗಳನ್ನು ಕೂಡಲೇ ಬಗೆಹರಿಸುವತ್ತ ದಿಟ್ಟ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ರಾಷ್ಟ್ರೋತ್ಥಾನ ಬಳಗದ ವಾರ್ಷಿಕೋತ್ಸವ

ಹರಿಹರಪುರ : ಸಾಹಿತ್ಯ ಸಂವಹನದ ಕಾರ್ಯವನ್ನು ರಾಷ್ಟ್ರೋತ್ಥಾನ ಬಳಗದ ಮೂಲಕ ರಾಷ್ಟ್ರೋತ್ಥಾನ ಪರಿಷತ್ ಕಳೆದ 25 ವರ್ಷಗಳಿಂದ ನಡೆಸುತ್ತಾ ಬಂದಿದೆ ಎಂದು 'ರಾಷ್ಟ್ರೋತ್ಥಾನ ವಾರ್ತಾ' ಸಂಪಾದಕ ಎಂ.ಎ. ದಯಾಶಂಕರ್ ಇಲ್ಲಿ ಹೇಳಿದರು.

ರಾಷ್ಟ್ರೋತ್ಥಾನ ಬಳಗದ ಸ್ಥಳೀಯ ಶಾಖೆಯ ವಾರ್ಷಿಕೋತ್ಸವ ಸಮಾರಂಭದಲಿ ಮಾತನಾಡಿದ ಅವರು, ಒಬ್ಬ ಲೇಖಕ ಕೃತಿ ರಚನೆ ಮಾಡಬಹುದು. ಆದರೆ ಅದನ್ನು ಜನರಿಗೆ ಮುಟ್ಟಿಸುವ ಮಹತ್ವದ ಕಾರ್ಯ ಮಾಡುವವರ ಕೊರತೆ ಇದೆ ಎಂದರು.

ಖ್ಯಾತ ಯಕ್ಷಗಾನ ಕಲಾವಿದ ಕುಂಬಳೆ ಸುಂದರ ರಾವ್ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಿದರು.

ಬಳಗದ ಜಿಲ್ಲಾ ಸಂಚಾಲಕ ಶಿವಸ್ವಾಮಿ ಮಾತನಾಡಿ ಈ ವರ್ಷ ಬೆಳ್ಳಿ ಹಬ್ಬದ ಅಂ... ಪರಿಷತ್ತು ಯೋಗ, ಸಂಗೀತ, ..., ಸಂಶೋಧನೆ ಮುಂತಾದ ವಿಭಾಗಗಳಲ್ಲೂ ಕಾರ್ಯ ಪ್ರಾರಂಭಿಸಿ ನಡೆಸುತ್ತಿದೆ ಎಂದರು.

ಸಮಾರಂಭದ ಅಧ್ಯಕ್ಷೆ ಲಲಿತಾ ನಂಜುಂಡಯ್ಯ, ಬಳಗದ ಅಧ್ಯಕ್ಷ ಮಾಧವ ಕಲ್ಕೂರ್ ಮಾತನಾಡಿದರು. ಕೆ. ಜಿ ಎಸ್. ಶಾಸ್ತ್ರಿ ಸ್ವಾಗತಿಸಿದರು. ಸಂಚಾಲಕ ಎಚ್. ಎಸ್. ನಾಗರಾಜ ವಂದಿಸಿದರು. ಭಾಸ್ಕರಾಚಾರ್ಯ ಕಾರ್ಯಕ್ರಮ ನಿರ್ವಹಿಸಿದರು. ಸಮಾರಂಭದ ನಂತರ ಬಳಗದ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. (ವರದಿ : ಶಿವಸ್ವಾಮಿ.)

ಅಡಿಕೆ ಧಾರಣೆ

ಶಿವಮೊಗ್ಗ : 16–3–1990
ಸರಕು : 3400–3871
ಬೆಟ್ಟೆ : 2300–2903
ಗೊರಬಲು : 1200–2000
ಏಲಕ್ಕಿ : ಸಕಲೇಶಪುರ
ಧಾರಣೆ 250 ರಿಂದ 300 ರ ವರೆಗಿದೆ. ಕೊಪ್ಪದಲ್ಲಿ ಮುಂದಿನ ವ್ಯಾಪಾರ 7–4–90 ರಂದು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು : ದೀಪಟಿಗೆ ಅಚ್ಚುಕೂಟ, ಕೊಪ್ಪ.